Urdu students are denied of their right of getting education in their mother tongue by not extending facility of upgrading shcools and providing adequate staff. Since last two and half years, I have been making repesentations for sanctioning the posts of Urdu teachers. I have requested the Hon'ble Minister for Eduation (Primary) for sanctioning 150 posts of Urdu teachers for Bidar district. It is surprising to learn that only two Urdu teachers posts are sanctioned by the D.L.R.C. It shows the total neglegence on the part of the Government in providing Urdu teachers for the students of Urdu mother tongue, opening of new classes and upgrading the schools from primary level to middle and from middle to secondary level.

I sincerely urge upon the Government to immediately sanction. 150 posts of Urdu teachers for Bider district and to accord sanction for opening of new classes wherever there is such stagnation and to do justice with this minority language people.

As per Government policy, the lear ning of regional language i. e., Kannada is necessary by the people of Karanataka. In Urdu schools, the posts of Kannada teachers are not created in schools of private management. The proposals sent by the mamagement of minority institution are turned down on the ground that there is no such Government Order. It shows the step-motherly treatment of Government. with the schools of private mangement. I therefore urge upon the Government to make necessary rules or to issue G. O. in this regard, so as the Urdu students may learn Kannada it the Schools run by the managements belonging to minoreties.

SRI JEEVARAJALVA.— Mr. Speaker, Sir, there is no stepmotherly treatment at all and the seriousness of the situation is understood by the Government and it will do everything possible to solve the Problem.

೮) ಕೊಡಗಿನ ಬಿಳಿಗೆರೆ ಗ್ರಾಮಕ್ಕೆ ಬಸ್ ಓಡಿಸುವುದು

ಶ್ರೀ ಡಿ. ಎ. ಚನ್ನಪ್ಪ.— ಮಾನ್ಯ ಅಧ್ಯಕ್ಷರೇ, ಕೊಡಗಿನ ಮಡಿಕೇರಿಯಿಂದ ಸುಮಾರು ೧೪ ಕಿ. ಮೀ. ದೂರವಿರುವ ಬಿಳಿಗೇರಿ ಗ್ರಾಮಕ್ಕೆ ಬೆಳಿಗ್ಗೆ ೮ ಗಂಟೆಗೆ ಮಡಿಕೇರಿಯಿಂದ ಒಂದು ಬಸ್ಸು ಹೊರಟು ೮ ೪೫ಕ್ಕೆ ಬಿಳಿಗೇರಿಗೆ ಮುಟ್ಟುವಂತೆ ಸುತ್ತು ಹಿಂದಕ್ಕೆ ಬಿಳಿಗೇರಿಯಿಂದ ಮಡಿಕೇರಿಗೆ ಬರುವಂತೆ ಮತ್ತು ಸಾಯಂಕಾಲ ೪.೩೦ಕ್ಕೆ ಮಡಿಕೇರಿಯಿಂದ ಹೊರಟು ೫ ಗಂಟೆಗೆ ಬಿಳಿಗೇರಿಗೆ ತಲುಪಿ ಹಿಂದಕ್ಕೆ ಬರುವಂತೆ ಒಂದು ಬಸ್ಸನ್ನು ಓಡಿಸಬೇಕು. ಬಿಳಿಗೇರಿ ಗ್ರಾಮದಲ್ಲಿರುವ ತೊಕ್ಕು, ಕಗ್ಗೊಡ ಬಿಳಿಗೇರಿ ಮತ್ತು ಕುಂಬಳದಾಳ ಗ್ರಾಮಗಳ ಶಾಲೆ ಮತ್ತು ಕಾಲೇಜುಗಳ ವಿದ್ಯಾರ್ಥಿಗಳಿಗೆ ಪ್ರಯತ್ನ ಸುಮಾರು ೪೫೦ ಗ್ರಾಮಸ್ಥರಿಗೆ ಅನುಕೂಲವಾಗುತ್ತದೆಯೆಂದು ನಾನು ಆರ್ಜಿ ಕೊಟ್ಟಿದಕ್ಕೆ. ಬಸ್ಸು ಓಡಿಸುತ್ತೇವೆ ಎಂಬುದಾಗಿ ಮಾನ್ಯ ಮಂತ್ರಿಗಳು ನನಗೆ ಭರವಸೆ ಕೊಟ್ಟು ಅಲ್ಲಿಯ ಡಿಪೋ ಮ್ಯಾನೇಜರ್‌ರವರಿಗೆ ಸ್ವತಃ ಹೇಳಿದ್ದರೂ ಸಹ ಈ ತನಕ ಬಸ್ಸು ಹಾಕಿಲ್ಲ. ಅನಂತರ ಶ್ರೀಮಾನ್ ವೀರಣ್ಣನವರು ಮಂತ್ರಿಯಾದಾಗ ಸಹ ಅವರು ಭರವಸೆ ಕೊಟ್ಟರು. ಆದರೆ ಈ ತನಕ ಬಸ್ಸು ಓಡಿಸಿಲ್ಲ.

ಈಗ ಳ ಗ್ರಾಮಂದ ಜನರು ರಸ್ತೆ ರೋಕೋ ಚಳುವಳಿಯನ್ನು ಪ್ರಾರಂಭಿಸುವಂತೆ ತೀರ್ಮಾನ ಮಾಡಿ ನನಗೆ ತಿಳುವಳಿಕೆ ಕೊಟ್ಟಿದ್ದಾರೆ. ದಿನಾಂಕ ೨೨ ರೊಳಗೆ ಪ್ರಾರಂಭ ಮಾಡಲು ಕೋರಿದ್ದಾರೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಕೂಡಲೇ ಒಂದು ಬಸ್ಸನ್ನು ಓಡಿಸಲು ಪ್ರಾರಂಭ ಮಾಡಬೇಕೆಂದು ಸರಕಾರದ ಗಮನ ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ (ಮೀನುಗಾರಿಕೆ ಸಚಿವರು). — ಮಾನ್ಯ ಅಧ್ಯಕ್ಷರೇ ಬಿಳಿಗೆರೆಯಿಂ ಮಡಿಕೇರಿಯಿಂದ ಸುಮಾರು ೨೫ ಕಿ. ಮೀ. ದೂರದಲ್ಲಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪ್ರಯಾಣಿಕರ ಸಾರಿಗೆಯ ವ್ಯವಸ್ಥೆ ರಾಷ್ಟ್ರೀಕರಣವಾಗಿರುವುದಿಲ್ಲ. ಬಿಳಿಗೇರಿ–ಮಡಿಕೇರಿ ಮಾರ್ಗವು ಖಾಸಗೀ ವಾಹನದ ಓಡಾಟದ ವ್ಯಾಪ್ತಿಯಲ್ಲಿರುತ್ತದೆ. ಮಡಿಕೇರಿ–ಸೋಮವಾರಪೇಟೆ ರಸ್ತೆಯಲ್ಲಿ ತಾಕೇರಿ ಎಂಬಲ್ಲಿಂದ ಮುಂದಕ್ಕೆ ಒಳ್ಳೆಯ ರಸ್ತೆಯಿಲ್ಲ. ಈ ಬಗ್ಗೆ ರಸ್ತೆಯು ಮಳೆಗಾಲದಲ್ಲಿ ಬಸ್ ಸಂಚಾರಕ್ಕೆ ಅನುಕೂಲವಾಗಿರುವುದಿಲ್ಲ. ಆಗ ಖಾಸಗೀ ವಾಹನಗಳೂ ಸಹ ಸಂಚರಿಸುವುದಿಲ್ಲ.

ಶ್ರೀ ರಾಮಪ್ಪ.— ಮಾವನ ಮನೆಗೆ ಕೇಳಿದರೆ ಅಳಿಯನ ಮನೆಗೆ ಕೊಟ್ಟಿದ್ದಾರೆ.

ಶ್ರೀ ಎಂ ರಘುಪತಿ. — ರಸ್ತೆ ಸಮೀಕ್ಷೆ ನಡೆಸಿ ವಾಹನ ಓಡಿಸುವ ಬಗ್ಗೆ ಸೂಕ್ತಕ್ರಮ ತೆಗೆದುಕೊಳಲಾಗುವುದು. ರಸ್ತೆ ಸರಿಯಿಲ್ಲವಾದ ಕಾರಣ ಬಸ್ ಓಡಾಡುತ್ತಿಲ್ಲ. ಈ ಬಗ್ಗೆ ಸಾರಿಗೆ ಸಚಿವರಿಗೆ ಹೇಳಿ ಸೂಕ್ತ ವಿಪರ್ಾಡು ಮಾಡಿಸುತ್ತೇನೆ.

೯) ಕರ್ನಾಟಕ ವಿಶ್ವ ವಿದ್ಯಾನಿಲಯದಲ್ಲಿ ಉರ್ದು ಪೀಠದ ಸ್ಥಾಪನೆ.

ಶ್ರೀ ಎಂ. ಎಲ್. ಉಸ್ತಾದ್.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿಶ್ವ ವಿದ್ಯಾನಿಲಯದಲ್ಲಿ ಉರ್ದು ಪೀಠವನ್ನು ಸ್ಥಾಪಿಸುವ ವಿಷಯ ಬಹಳ ಕಾಲದಿಂದಲೂ ಹಾಗೆಯೇ ಉಳಿದಿದೆ. ವಿಶ್ವ ವಿದ್ಯಾನಿಲಯದವರು ಉರ್ದು ಭಾಷೆಯ ಬೆಳವಣಿಗೆ ಹಾಗೂ ಉರ್ದು ಭಾಷೆಯ ಬಗ್ಗೆ ಸಂಶೋಧನೆ ನಡೆಸುವ ವಿದ್ಯಾರ್ಥಿಗಳಿಗೆ ಅನುಕೂಲ ಒದಗಿಸುವ ಸಲುವಾಗಿ ಉರ್ದು ಪೀಠವನ್ನು ಸ್ಥಾಪಿಸುವ ಬಗ್ಗೆ ೫ ಲಕ್ಷ ರೂಪಾಯಿಗಳನ್ನು ನೀಡುವಂತೆ ಸರ್ಕಾರವನ್ನು ಕೋರಿದ್ದಾರೆ. ಆ ಬಗ್ಗೆ ಸರ್ಕಾರ ಯಾವ ಕ್ರಮವನ್ನೂ ಕೈ ಕೊಂಡಿಲ್ಲ. ಆದ್ದರಿಂದ ಸರಕಾರ ಕೂಡಲೇ ಐದು ಲಕ್ಷ ರೂಪಾಯಿಗಳನ್ನು ಕರ್ನಾಟಕ ವಿಶ್ವ ವಿದ್ಯಾಲಯಕ್ಕೆ ಕೂಡಲೇ ಒದಗಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇವೆ.

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—ಮಾನ್ಯ ಸದಸ್ಯರ ಸಲಹೆಯನು ಸರ್ಕಾರ ಪರಿಶೀಲನೆ ಮಾಡುತ್ತದೆ.

೧೦) ಉಡುಪಿ ಮಲ್ಪೆ ಪ್ರಾಧಿಕಾರದ ಬಗ್ಗೆ

ಶ್ರೀಮತಿ ಮನೋರಮಾ ಮಧ್ವರಾಜ್ —ಮಾನ್ಯ ಅಧ್ಯಕ್ಷರೇ, ಉಡುಪಿ–ಮಲ್ಪೆ ಪ್ರಾಧಿಕಾರದ ಕಥೆ–ಇದು ಪರಿಸರದ ಜನಕ್ಕೆಲ್ಲ ಮಾನ ಇದರ ಕಾರ್ಯ ನಿರ್ವಹಣೆ ವರವಾಗಿಂತ ಬದಲು ಶಾಪವಾಗಿ ಪರಿಣಮಿಸಿದೆ. ಹಿಂದಿನ ಸರ್ಕಾರದ ಕಾಲದಲ್ಲಿ ಒಂದು ಮನೆ ಕಟ್ಟಲು ರೂ. ಹತ್ತು ಶುಲ್ಕ ವಿಧಿಸಂತಿದ್ದರೆ ಈಗ ರೂ. ೫೦೦–ರಿಂದ ರೂ. ೨೦೦೦ ದ ವರೆಗೆ ಶುಲ್ಕದ ಹೇರಿಕೆ. ಮಂಜೂರಾದ ಲೇ–ಔಟ್‌ಗಳಲ್ಲಿ ಮನೆ ಕಟ್ಟಲು ಅನುಮತಿ ಕೇಳಿದಾಗ ನಿರಾಕರಣೆ, ಪಾರ್ಕಿಂಗ್ ಜಾಗ ಇರಿಸಲಿ, ಸೆಟ್ ಬ್ಯಾಕ್ ಇಲ್ಲದೆ, ಟಾನಾ ಪ್ಲಾನಿಂಗ್ ನಿಯಮದ ವಿರುದ್ಧ ಕಟ್ಟಡದ ರಚನೆ, ಒಂದೇ ಭಾಗದಲ್ಲಿ ಲೇ ಔಟ್ ಮಂಜೂರಾತಿಗೆ ಒಬ್ಬೊಬ್ಬರಿಗೆ ಒಂದೊಂದು ನಿಯಮ. ಅಧಿಕಾರಿ ಒಲಿದರೆ ೨೦ ಅಡಿ ಬಲಿಸಿಕೊಳ್ಳಲಾಗದಿದ್ದರೆ ೩೦ ಅಡಿ ದೂರದಲ್ಲಿ ಮನೆ ಕಟ್ಟಬೇಕು–ರಸ್ತೆಯ ಬಿದಿಯಿಂದ ಡ್ರೈನೇಜ್ ಇಲ್ಲದೆ ಬೋರ್ಡಿಂಗ್–ಲಾಡ್ಜಿಂಗ್ ಕಟ್ಟಡದ ರಚನೆಗೆ ಅನುಮತಿ, ೩ ಸೆಂಟ್ಸ್ ಮನೆ ಜಾಗ ಸರ್ಕಾರದಿಂದ ಸಿಕ್ಕಿದ ಬಡವರೂ ಅನುಮತಿಗಾಗಿ ೩ ತಿಂಗಳು ಕಾಯಬೇಕಾದ ಪರಿಸ್ಥಿತಿ–ಈಚೆಗಂತೂ ಪ್ರಾಧಿಕಾರ ಸಮಿತಿಯನ್ನೇ ರದ್ದು ಮಾಡಿ, ಹೊಸ ಸಮಿತಿಯನ್ನು ನೇಮಕ ಮಾಡದಿರುವುದು–ಇದು ಪ್ರಾಧಿಕಾರದ ಪ್ರಾರಬ್ಧದ ಕಥೆ. ಜನಸಾಮಾನ್ಯರಿಗಾದ ಅನ್ಯಾಯದ ವ್ಯಥೆ ಈ ಕವಿತೆ ಕೂಡಲೇ ತನಿಖೆ ನಡೆಸಬೇಕು, ಪ್ರಾಧಿಕಾರದ ನೇಮಕ ಆಗುವ ತನಕ ಮಂಜೂರಾತಿ ನೀಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗಾದರೂ ನೀಡಬೇಕು. ಅದಕ್ಕಿಂತಲೂ ನನ್ನ ಸೂಚನೆ ಎಂದರೆ, ಪ್ರಾಧಿಕಾರವಿಲ್ಲ ಅಧಿಕಾರ